ಪಿ.ಎನ್. ಶ್ರೀವತ್ಸ, ಬೆಂಗಳೂರು
*ಈ ವಿಭಾಗದಲ್ಲಿ ಮುಂದೊಂದು ದಿನ ಮಹಿಳೆ ಉತ್ತರಿಸುವುದನ್ನು ಕಾಣಬಹುದೆ?*



ಮೊದಲಿನಿಂದಲೂ ಮಹಿಳೆಯೇ ಉತ್ತರಿಸುತ್ತಿರುವುದು – ಸರಸ್ವತಿಯದೇ ಉತ್ತರ, ನಾವೆಲ್ಲಾ ಅವಳ ಗುಮಾಸ್ತರಷ್ಟೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಹುಲಿಯೊಂದು ಮನುಷ್ಯನನ್ನು ಕೊಂದರೆ ಹಿಂಸೆ; ಹುಲಿಯನ್ನು ಮನುಷ್ಯ ಕೊಂದರೆ ಬೇಟೆ ಎನ್ನುತ್ತಾರಲ್ಲಾ, ಏಕೆ?*
ಹುಲಿಯನ್ನು ಕೊಂದಾಗಲೆಲ್ಲಾ ಬೇಟೆ ಎಂದೇ ಹೇಳಬೇಕೆಂದಿಲ್ಲ; ಕೆಲವರು ಬಾಪ್ ರೇ, ಬಾಪ್ ಎಂದೂ ಹೇಳುತ್ತಾರೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಮಧ್ಯರಾತ್ರಿಯಲ್ಲಿ ಹೈವೇ ರಸ್ತೆಯಲ್ಲಿ ಸುಂದರ ತರುಣಿಯೊಬ್ಬಳು ಒಬ್ಬಂಟಿಯಾಗಿ ನಡೆದುಹೋದರೆ?*
ಗಾಂಧೀಜಿಯ ಆತ್ಮ ಸಂತೋಷದಿಂದ ಚಪ್ಪಾಳೆ ತಟ್ಟುತ್ತದೆ!

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
*ನಂಬಿಕೆಟ್ಟವರನ್ನು ಏನೆನ್ನಬೇಕು?*



ಮತದಾರರು!

ಕೆ.ಎನ್.ಕನಕಾಂಬಿಕ, ಶಂಕರಘಟ್ಟ
*ಕೆಲಸಕ್ಕೆ ತಕ್ಕ ಸಂಬಳ ಎಂದು ಮಾಡಿದರೆ ಹೇಗಿರುತ್ತೆ ಸರ್?*
ಗೃಹಿಣಿ ಮಾಡುವ ಕೆಲಸಕ್ಕೆ ತಕ್ಕ ಪ್ರಮಾಣದ ಸಂಬಳ ಕೊಡಲಾಗದೆ ಗಂಡ ದಿವಾಳಿಯಾಗುತ್ತಾನೆ!

ಉದಯಶಂಕರ್ ರಾವ್, ದೊಡ್ಡಬಳ್ಳಾಪುರ
*ಅವಿದ್ಯಾವಂತ ಹೆತ್ತವರನ್ನು ವಿದ್ಯಾವಂತ ಮಕ್ಕಳು ವಂಚಿಸುವುದು ಎಷ್ಟು ಸರಿ ರಾಮ್?*
ಗೆದ್ದಲು ಹುಳಗಳೇ ಹಾಗೆ; ಆಶ್ರಯವಿತ್ತ ಮರವನ್ನೇ ಪುಡಿ ಮಾಡಿಬಿಡುತ್ತವೆ.

ಎಚ್.ಆರ್. ದೇಸಾಯಿ, ರಾಯಚೂರು
*ಅಜ್ಞಾನಿ, ಜ್ಞಾನಿ, ವಿಜ್ಞಾನಿ ಇವರಲ್ಲಿ ಯಾರ ಜೊತೆ ಮಿತ್ರತ್ವ ಒಳ್ಳೆಯದು?*
ಕುತೂಹಲಿಯಾದರೆ ವಿಜ್ಞಾನಿಯ, ಆಸಕ್ತನಾದರೆ ಜ್ಞಾನಿಯ, ರಾಜಕಾರಣಿಯಾದರೆ ಅಜ್ಞಾನಿಯ ಮಿತ್ರತ್ವ ಲಾಭಕರ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ನಮ್ಮ ದೇವಸ್ಥಾನಗಳಲ್ಲಿ ಹೆಂಗಸರನ್ನು ಪೂಜಾರಿಣಿಗಳಾಗಿ ನೇಮಕ ಮಾಡಿದರೆ ಏನಾಗುತ್ತೆ?*
ಅವರು ಮೇಕಪ್ ಮಾಡಿಕೊಂಡು ಬರುವ ವೇಳೆಗೆ ದೇವಸ್ಥಾನ ಮುಚ್ಚುವ ಟೈಂ ಆಗುತ್ತೆ!

ಎಸ್. ತಾರಾನಾಥ್, ಅಚ್ಚಪ್ಪನಕೊಪ್ಪಲು
*ಹಣ ಇರುವೆಡೆಯೇ ವಿವಾದಗಳು ಹೆಚ್ಚು, ಏಕೆ?*
ಲಾಯರ್ ಫೀಸ್ ಕೊಡಲು ತಾಕತ್ತಿರುವುದರಿಂದ!

ಶ್ರೀಮತಿ ಸುನಂದ, ಗೌರಿಬಿದನೂರು
*ಈ ಶತಮಾನದ ಸ್ತ್ರೀಯನ್ನು ಗೌರವಿಸಬೇಕೆ, ಪ್ರೀತಿಸಬೇಕೆ, ದ್ವೇಷಿಸಬೇಕೆ, ಅಥವಾ ನಿರ್ಲಕ್ಷಿಸಬೇಕೆ?*
ಗೌರವದಿಂದ ಪ್ರೀತಿಸಿ, ದ್ವೇಷವನ್ನು ನಿರ್ಲಕ್ಷಿಸುವುದೇ ಸೂಕ್ತ!

ನವಿರವಿ, ಚಿಕ್ಕಮಗಳೂರು
*ಮದುವೆಯಲ್ಲಿ ತಾಳಿ ಕಟ್ಟುವಾಗಲೇ ವಾದ್ಯವನ್ನು ಏಕೆ ಜೋರಾಗಿ ನುಡಿಸುತ್ತಾರೆ?*
ಅವರಿಬ್ಬರ ಲೈಫ್ ಸೌಂಡ್ ಆಗಿರಲಿ ಎಂದು ಸೂಚಿಸಲು!

ಕೆ. ಹರೀಶ್‌ಕುಮಾರ್, ಪುತ್ತೂರು
*ಜೀವನ ಎಂಬ ದೋಣಿಗೆ ನಂಬಿಕೆ ಪ್ರೀತಿಗಳೆಂಬ ಹಾಯಿ ಇಲ್ಲದಿದ್ದರೆ ದೋಣಿ ತೇಲುವುದೋ, ಮುಳುಗುವುದೋ?*
ತೇಲುವುದು; ಆದರೆ ತಲೆಕೆಳಗಾಗಿ ತೇಲುವುದು!

ಕೆ.ಎನ್.ನಾರಾಯಣರೆಡ್ಡಿ, ಕೆ.ಜಿ.ಎಫ್.
*ನಾನು ಆದರ್ಶ ಜೀವನ ನಡೆಸಬೇಕೆಂದಿದ್ದೇನೆ, ಸಮಾಜ ಗುರುತಿಸುವುದೇ?*
ವಿಶ್ವದಲಿ ಚಕ್ರವನು ಕಂಡುಹಿಡಿದವನಾರು, ಬೆಂಕಿಯೊಳು ಕೋಳಿಯಂ ಬೇಯಿಸಿದನಾರು, ದಾಖಲಿಸಲಿಲ್ಲ ಜಗ ರಸಪಾಕ ಪರಿಣಿತರ, ಜಸ ನಿಮಗೆ ದಕ್ಕುವುದೆ ರೆಡ್ಡಿಗಾರು?!

## ಬಹುಮಾನಿತ ಪ್ರಶ್ನೆ

ಆರ್.ಎಂ.ಪೈ. ಚೇತನಾ ಹೊನ್ನಾವರ
*ದೇಹಕ್ಕಿಂತ ದೇಶ ದೊಡ್ಡದು ಎನ್ನುತ್ತಾರೆ, ಏಕೆ?*
ಏಕೆಂದರೆ ದೇಹಪ್ರೇಮ ಕೇವಲ ಒಂದು ಹಂತ, ದೇಶಪ್ರೇಮ ಅನಂತ!

ಗಾಯತ್ರಿ, ರಾಜಾಜಿನಗರ
*ದೇವರಿಗೆ ಕಾಣಿಕೆ ಕೊಡುವುದು ಪುಣ್ಯ ಸಂಪಾದಿಸಲಿಕ್ಕೋ, ಪಾಪ ಕಳೆದುಕೊಳ್ಳಲಿಕ್ಕೋ?*
ಪಾಪ ಕಳೆದುಕೊಳ್ಳಲೆಂದೇ... ಹಲವರ ಪಾಲಿಗೆ ದೇವನು sin detergent.

ದೀಪಾ ವೆಂಕಟೇಶ್ ಮಹಾಲೆ, ಸಾಂಬ್ರಾಣಿ
*ನಮ್ಮ ಭವಿಷ್ಯ ನಮ್ಮ ಕೈಯಲ್ಲೇ ಇದ್ದರೂ ಜ್ಯೋತಿಷಿಗಳಿಂದ ಭವಿಷ್ಯ ಕೇಳುವುದೇಕೆ?*
ಅವರು ನಮ್ಮ ಜನ್ಮ ಜಾಲಾಡುವುದರಲ್ಲಿ ಪರಿಣಿತರಾದ್ದರಿಂದ!

ಶ್ವೇತಲಕ್ಷ್ಮಿ ಅಮ್ಮೆ, ಬೆಂಗಳೂರು
*ಕೆಲವರು ಎಷ್ಟೇ ಕಷ್ಟ ಬಂದರೂ ನಗುನಗುತ್ತಲೇ ಇರುತ್ತಾರಲ್ಲಾ...?*



ಯಥಾ ರಾಜಾ ತಥಾ ಪ್ರಜಾ!

ಮಹಾವೀರ ಕಾಸರ, ಶಿವಮೊಗ್ಗ
*ಪ್ರೇಮಪೂಜಾರಿಗೆ ದೇವರು ಯಾರು? ದೇವಾಲಯ ಯಾವುದು?*
ಪ್ರೇಮಿಯೇ ದೇವರು, ಪಾರ್ಕೇ ದೇವಾಲಯ, ಲವ್ ಲೆಟರ್‌ಗಳೇ ಮಂತ್ರಗಳು, ಕಪಾಳಮೋಕ್ಷವೇ ಪ್ರಸಾದ!

ಅಜಿತ್ ಸಾಲ್ಯಾನ್, ಮುಂಬೈ
*ಹೆಣ್ಣು ಕುಶಾಗ್ರಮತಿ; ಗಂಡು?*
Love ಆಗ್ರಮತಿ – ಸದಾಕಾಲ ಲವ್ ಬಗ್ಗೆಯೇ ಯೋಚಿಸುವವನು!

ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ
*ರಾಜಕಾರಣಿಗಳೆಲ್ಲಾ ತಿಹಾರ್ ಜೈಲಿಗೆ ಧಾವಿಸುತ್ತಿದ್ದರೆ ಅಲ್ಲಿನ ಕಳ್ಳಕಾಕರ, ಕೊಲೆಗಡುಕರ ಗತಿಯೇನು?*
ಡೋಂಟ್ ವರಿ; ಇವರಿಂದ ಪಟ್ಟುಗಳನ್ನು ಕಲಿತು ಅವರೂ ಮಂತ್ರಿಗಳಾಗುತ್ತಾರೆ!

ರಾಮ್